ಜಮೀನು ತಪಾಸಣೆ ಕಾರ್ಯವು ನಡೆದಿರುವುದಿಲ್ಲ.

ರಾಜ್ಯದ ಐ.ಪಿ.ಎಸ್. ಅಧಿಕಾರಿಗಳ ಮೇಲೆ ಲೋಕ ಆಯುಕ್ತರು ದಾಖಲೆ ಮಾಡಿರುವ ಕೇಸುಗಳು.

3041(3495)

ಶ್ರೀ ಕರಿಯಣ್ಣ (ಹೊಳೆಹೊನ್ನೂರು): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಎಷ್ಟು ಜನ ಐ.ಪಿ.ಎಸ್. ಅಧಿಕಾರಿಗಳ ಮೇಲೆ ಲೋಕಾಯುಕ್ತರ ಕೇಸುಗಳು ಇವೆ? ಹೆಸರುಗಳೂಂದಿಗೆ ತಿಳಿಸುವುದು?

ಆ. ಇವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಇ. ಇಲ್ಲದಿದ್ದಲ್ಲಿ ಇವರ ಮೇಲೆ ಕ್ರಮ ಕೈಗೊಳ್ಳದಿರಲು ಕಾರಣವೇನು?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು):

ಅ. ಕೇಸುಗಳ ಸಂಖ್ಯೆ: 1, ಅಧಿಕಾರಿಯ ಹೆಸರು : ಶ್ರೀ ಕಂಪಯ್ಯ

ಆ. ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ.

ಇ. ಲೋಕಾಯುಕ್ತದವರಿಂದ ಅಂತಿಮ ತನಿಖಾ ವರದಿ ಸರ್ಕಾರಕ್ಕೆ ಬಂದಿರುವುದಿಲ್ಲ. ಆದುದರಿಂದ ಈ ಹಂತದಲ್ಲಿ ಯಾವುದೇ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಭದ್ರ ಬಲದಂಡೆ ಆಧುನೀಕರಣದ ಬಗ್ಗೆ ಸರ್ಕಾರದ ಕ್ರಮ.

3042(3496)

ಶ್ರೀ ಕರಿಯಣ್ಣ(ಹೊಳೆಹೊನ್ನೂರು): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ. ಭದ್ರಾ ಬಲದಂಡೆ ಮತ್ತು ಎಡದಂಡೆ ನಾಲೆಗಳನ್ನು ಆಧುನೀಕರಣ ಮಾಡುವ

ಬಗ್ಗೆ 2 ವರ್ಷಗಳ ಹಿಂದೆ ಬಜೆಟ್‌ನಲ್ಲಿ ಹಣ ನಿಗಧಿ ಮಾಡಿ ಈಗ 16 ಕೋಟಗಳನ್ನು ಖರ್ಚು ಮಾಡಲಾಗಿದೆ? ಆದರೆ ಈ ವರ್ಷ ಇದಕ್ಕೆ ಬಜೆಟ್‌ನಲ್ಲಿ ಹಣ ನಿಗಧಿ ಮಾಡಿಲ್ಲದಿರುವುದಕ್ಕೆ ಕಾರಣವೇನು?

ಆ. ಇದನ್ನು ಆಧುನೀಕರಣ ಮಾಡದಿದ್ದರೆ ನಾಲೆಗಳು, ಸೇತುವೆಗಳು, ಉಪನಾಲೆಗಳು, ಕಲ್ವರ್ಟುಗಳು ಸಂಪೂರ್ಣವಾಗಿ ನಾಶವಾಗುವ ಪರಿಸ್ಥಿತಿಯಲ್ಲಿ ಇರುವುದರಿಂದ ಇದರ ರಕ್ಷಣೆಗೆ ಸರ್ಕಾರದ ಕ್ರಮವೇನು?

ಶ್ರೀ ಎಚ್.ಕೆ.ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ. ಭದ್ರಾ ಯೋಜನೆಯನ್ನು ಪಂಚವಾರ್ಷಿಕ ಯೋಜನೆಯ ಪ್ರಾರಂಭಕ್ಕೆ ಮುಂಚೆ ಕೈಗೆತ್ತಿಕೊಳ್ಳಲಾಗಿತ್ತು. ಯೋಜನಾ ಆಯೋಗವು ಪಂಚವಾರ್ಷಿಕ ಯೋಜನೆಯ ಪ್ರಾರಂಭಕ್ಕೆ ಮುನ್ನಾ ಕೈಗೆತ್ತಿಕೊಂಡ ಯೋಜನೆಗಳನ್ನು ಅಂತ್ಯಗೊಳಿಸಲು ರಾಜ್ಯಗಳಿಗೆ ಒತ್ತಾಯಿಸುತ್ತಿದೆ. ಭದ್ರಾ ಯೋಜನೆಯ ಕಾಲುವೆಗಳ ಆಧುನೀಕರಣ ಮಾಡುವ ಉದ್ದೇಶವಿದೆ. ಭದ್ರಾ ಯೋಜನೆಯ ಕಾಲುವೆಗಳಲ್ಲಿ ನೀರು ನಿಲ್ಲಿಸದ ಕಾಲುವೆಗಳ ಆಧುನೀಕರಣ ಮಾಡುವ ತಾಂತ್ರಿಕತೆ ಬಗ್ಗೆ ಅಧ್ಯಯನ ನಡೆಸಿ ವರದಿ ನೀಡಲು ಉನ್ನತ ಮಟ್ಟದ ತಾಂತ್ರಿಕ ಸಮಿತಿಯನ್ನು ರಚಿಸಲು ಕ್ರಮ ಕೈಗೆತ್ತಿಕೊಳ್ಳಲಾಗಿದೆ. ತಾಂತ್ರಿಕ ಸಮಿತಿಯ ವರದಿ ಬಂದ ನಂತರ ಕ್ರಮ ಕೈಗೊಳ್ಳಲಾಗುವುದು. ಆದ್ದರಿಂದ ಈ ವರ್ಷದ ಬಜೆಟ್‌ನಲ್ಲಿ ಹಣ ನಿಗದಿ ಪಡಿಸಲಾಗುವುದಿಲ್ಲ.

ಆ. ಅತ್ಯವಶ್ಯಕವಾಗಿ ದುರಸ್ತಿಗೊಳಿಸಬೇಕಿರುವ ಕಾಲುವೆಯ ಮತ್ತು ಸೇತುವೆಗಳ ದುರಸ್ತಿಯನ್ನು ಆದ್ಯತೆಗನುಗುಣವಾಗಿ ನಿರ್ವಹಣಾ ಅನುದಾನದಲ್ಲಿ ಕೈಗೆತ್ತಿಕೊಂಡು ನಿರ್ವಹಿಸಲಾಗುವುದು.

ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ಕೊಲೆ, ಸುಲಿಗೆ ಪ್ರಕರಣಗಳು.

3045(3449)

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು(ಶಿವಾಜಿನಗರ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಜನವರಿ 2001 ರಿಂದ ಈವರೆಗೆ ಸಂಭವಿಸಿರುವ ಕೊಲೆ, ಸುಲಿಗೆ, ಸರ ಅಪಹರಣ, ದರೋಡೆ, ಕಳ್ಳತನಗಳ ಪ್ರಕರಣಗಳೆಷ್ಟು?